ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಳಚರಂಡಿ ವ್ಯವಸ್ಥೆ ಬಗ್ಗೆ ಚಾಮರಾಜನಗರ ಪಟ್ಟಣಪ್ರದೇಶದಲ್ಲಿ ಮಾಡತಕ್ಕಂಥ ಯೋಜನೆ ಎಲ್ಲಾ ತಯರಾಗಿ ಅದು ಆಡಳಿತಾತ್ಮಕ ಅನುಮೋದನೆಗಾಗಿ ಬರಬೇಕಾಗಿದೆ. ಎಲ್ಲಾ ವ್ಯವಸ್ಥೆಯಾಗಿದೆ. ಆದ್ದರಿಂದ ಈಗ ತಮ್ಮ ಸರ್ಕಾರದವರು ಕೂಡಲೇ ಅದನ್ನು ಕಾರ್ಯಗತ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರೋ?

ಶ್ರೀ ವೈಜನಾಥ ಪಾಟೀಲ್ : ಒಂದನೇ ಮೂರರಷ್ಟು ಹಣವನ್ನು ಸ್ಥಳೀಯ ಸಂಸ್ಥೆಗಳು ಕೊಟ್ಟರೆ ಮಾಡುತ್ತೇವೆ. ಈ ಪಾಲಿಸಿ ತಮಗೂ ಕೂಡ ಅನ್ವಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪುರಸಭೆಗಳಲ್ಲಿ ಒಂದು ಪೈಸೆ ತೆಗೆದುಕೊಳ್ಳುವುದಕ್ಕೂ ಅವರಲ್ಲಿ ಹಣ ಇಲ್ಲ. ಆದ್ದರಿಂದ ಅವರಿಗೆ ಹಣ ಕೊಡಿ ಎಂದು ಕೇಳುವುದು ಬಿಟ್ಟು ಸರ್ಕಾರ ಬೇರೆ ವಿಧಾನವನ್ನು ಅನುಸರಿಸಲಿ. ಈಗ ಅನೇಕ ಪುರಸಭೆಗಳಲ್ಲಿ ತಮ್ಮ ಕೆಲಗಸಗಾರರಿಗೆ ಸಂಬಳ ಕೊಡುವುದಕ್ಕೂ ಹಣ ಇಲ್ಲ. ಆದ್ದರಿಂದ ನೀವು ಪುರಸಭೆಗಳಿಗೆ ಹಣ ಕೊಡಿ ನಾವು ನೀರು ಕೊಡುತ್ತೇವೆ ಎಂದು ಹೇಳಿದರೆ ಅದು ಸಾಧ್ಯವಿಲ್ಲ. ದಯಮಾಡಿ ಸರ್ಕಾರ ವಿಶೇಷವಾದಂಥ ತೀರ್ಮಾನ ತೆಗೆದುಕೊಂಡು ಮಾಡಬೇಕು. ಏಕೆಂದರೆ ಪುರಸಭೆ ಹಣ ಕೊಡುವುದನ್ನು ನಂಬುವುದಕ್ಕೆ ಆಗುವುದಿಲ್ಲ. ಪುರಸಭೆಯ ಹಣ ನಂಬಿದರೆ ನಾವು ನೀರು ಕುಡಿಯುವುದಕ್ಕೂ ಆಗುವುದಿಲ್ಲ, ನೀರೂ ಬರುವುದಿಲ್ಲ. ಆದ್ದರಿಂದ ಸರ್ಕಾರ ಒಮ್ಮೆ ನಿರ್ಧಾರ ಮಾಡಿಕೊಂಡು ತಾವೇ ಹಣ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ವೈಜನಾಥ ಪಾಟೀಲ್ : ಇಡೀ ರಾಜ್ಯದಲ್ಲಿ ಎಷ್ಟೋ ಪುರಸಭೆಗಳು ಇವೆ, ಅವುಗಳೆಲ್ಲದರ ಸಲುವಾಗಿ ಒಂದು ನೀತಿಯನ್ನು ಮಾಡಬೇಕಾಗುತ್ತದೆ. ನೀವು ಹೇಳಿದ್ದುದು ಇದು ಒಂದೇ ಪುರಸಭೆ ಅಲ್ಲ. ಇದರ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಕೊರಗ ಜನಾಂಗದ ಅಭಿವೃದ್ಧಿ ಬಗ್ಗೆ

306 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಗ ಜನಾಂಗದವರ ಅಭಿವೃದ್ಧಿ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಹಾಗಿದ್ದಲ್ಲಿ ಅವರ ಕುಲ-ಕಸುಬು ಪರಂಪರೆಯನ್ನು ಅವಲಂಬಿಸಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಇತ್ಯಾದಿಗಳ ಬಗ್ಗೆ ರೂಪುರೇಷೆ ಏನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಜನಾಂಗವಾದ ಕೊರಗದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು 1994-95ನೇ ಸಾಲಿನಿಂದ 4 ವರ್ಷದ ಅವಧಿಯಲ್ಲಿ ಒಟ್ಟು 274.649 ಲಕ್ಷಗಳ ಅಂದಾಜು ವೆಚ್ಚದಲ್ಲಿ ಹಂತಹಂತವಾಗಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

1) ಕೊರಗರು ವಾಸಿಸುವ ಮನೆಗಳ ದುರಸ್ತಿ
2) ವಸತಿ ನಿರ್ಮಾಣ
3) ಒಂದು ಎಕರೆಗಿಂತ ಹೆಚ್ಚಿನ ಹಿಡುವಳಿದಾರರಿಗೆ ನೀರಾವರಿ ಸೌಲಭ್ಯ
4) ನಿರುದ್ಯೋಗಿಗಳಿಗೆ ತರಬೇತಿ
5) ಮನೆಯಿದ್ದವರಿಗೆ ವಿದ್ಯುತ್ ಕಲ್ಪಿಸುವುದು

6) ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿ

7) ಸ್ವಯಂ ಉದ್ಯೋಗ ಯೋಜನೆಯ ಅಳವಡಿಕೆ

ತತ್ಸಂಬಂಧ 1994-95ನೇ ಸಾಲಿನಲ್ಲಿ ರೂ. 58.86 ಲಕ್ಷಗಳನ್ನು ದಿನಾಂಕ: 4-2-95ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ಆ) 1994-95ನೇ ಸಾಲಿನಲ್ಲಿ ಕುಲಕಸುಬು ಪರಂಪರೆಯನ್ನು ಅವಲಂಬಿಸಿದ ವೃತ್ತಿಪರ ಕಾರ್ಯಕ್ರಮಗಳಿಗಾಗಿ ಕೆಳಕಂಡ ಯೋಜನೆಗಳಿಗೆ ರೂ. 17.40 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

1) ಬುಟ್ಟಿ ತಯಾರಿಕೆಗೆ ಬಿದಿರು ಸರಬರಾಜು

2) ವೃತ್ತಿ ತರಬೇತಿ

3) ಕೈಗಾರಿಕಾ ಘಟಕ ಸ್ಥಾಪನೆ

4) ಆರ್ಥಿಕ ಆದಾಯ ತರುವ ಸವಲತ್ತುಗಳ ನಿರ್ಮಾಣ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ; ಆದರೆ ಮಾನ್ಯ ಮಂತ್ರಿಗಳು ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಮೂರನೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಈ ಕೊರಗರನ್ನು ಕೃಷಿಕರನ್ನಾಗಿ ಪರಿವರ್ತಿಸುವ ಮತ್ತು ಅವರಿಗೆ ಸಾಮಾಜಿಕ ಸ್ಥಾನಮಾನ ಕೊಡುವ ಕಾರ್ಯಕ್ರಮ ಸರ್ಕಾರದ ಮುಂದೆ ಇದೆಯೇ ಎಂದು ಕೇಳುತ್ತಿದ್ದೇನೆ. ನಿರುದ್ಯೋಗಿಗಳಿಗೆ ಯಾವ್ಯಾವ ತರಹ ತಾವು ಉದ್ಯೋಗ ಮತ್ತು ತರಬೇತಿ ಕೊಡುತ್ತಿದ್ದೀರಿ ಎಂದು ಮತ್ತೊಂದು ಪ್ರಶ್ನೆ ಕೇಳುತ್ತಿದ್ದೇನೆ. 1993ರಲ್ಲಿ ಕೊರಗರ ಅಭಿವೃದ್ಧಿ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾ॥ ಮಹಮದ್ ಪೀರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ಆ ವರದಿ ಬಗ್ಗೆ ತಾವೇನು ಮಾಡುತ್ತಿದ್ದೀರಿ ಎಂದು ಆ ವಿಚಾರವನ್ನು ತಿಳಿಸಬೇಕು. ಇದರ ಬಗ್ಗೆ ಕೊರಗ ಜನಾಂಗದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಸಾಮೂಹಿಕ ಪ್ರತಿಭಟನೆ ಮತ್ತು ಸತ್ಯಾಗ್ರಹ ಮಾಡುವ ಯೋಚನೆಯನ್ನು ಹಮ್ಮಿಕೊಂಡಿದ್ದಾರೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಕೊರಗರ ಬಗ್ಗೆ ನಿರ್ಧಾರಾತ್ಮಕ ಯಾವುದಾದರೂ ಒಂದು ಧೋರಣೆ ಸರ್ಕಾರದ ಮುಂದೆ ಇದೆಯೇ ಎಂದು ತಿಳಿಯಲು ಅಪೇಕ್ಷಿಪಡುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸದಸ್ಯರು ಮೂರನೆಯ ಪ್ರಶ್ನೆಗೆ ಉತ್ತರ ಕಳಿಸಿಲ್ಲವೆಂದು ಹೇಳಿದ್ದಾರೆ. ಅದನ್ನು ತರಿಸಿ ನಾನು ನೋಡುತ್ತೇನೆ. ಇಲ್ಲಿ ಇರತಕ್ಕಂಥಾದ್ದು ಎರಡು ಪ್ರಶ್ನೆಗಳು. ಮೂರನೆಯ ಪ್ರಶ್ನೆಯನ್ನು ಅವರು ಕಳಿಸಿಕೊಟ್ಟಿದ್ದೇ ಆದರೆ ಈ ಮೂರನೇ ಪ್ರಶ್ನೆಗೆ ನಾನು ಉತ್ತರವನ್ನು ಕಳಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮತ್ತೊಂದು, ಒಂದು ಸಮಿತಿಯ ವರದಿಯ ಬಗ್ಗೆ ಹೇಳಿದ್ದಾರೆ. ಸಧ್ಯಕ್ಕೆ ಆ ಬಗ್ಗೆ ನನ್ನ ಹತ್ತಿರ ಉತ್ತರ ಇಲ್ಲ. ಕೊರಗ ಜನಾಂಗದ ಅಭಿವೃದ್ಧಿ ಬಗ್ಗೆ ಅದೇನು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ನಾನು ತರಿಸಿಕೊಂಡು ನೋಡುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ಎನ್.ಆರ್. ಪುರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

299 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹ ರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವ ವಿಷಯ ನಿಜವೇ?